ನೀಡಿದಂತಾಗುತ್ತದೆ, ಹದಿವಯಸ್ಸಿನ ಮಕ್ಕಳು ಲೈಂಗಿಕ ಪ್ರಯೋಗಗಳನ್ನು ಮಾಡುವ ದುಸ್ಸಾಹಸಕ್ಕೆ ಇಳಿಯುತ್ತಾರೆ; ಎಳೆವಯಸ್ಸಿನ ಹೆಣ್ಣು ಮಕ್ಕಳು ಗರ್ಭಪಾತ ಮಾಡಿಸಿಕೊಳ್ಳುತ್ತಾರೆ; ಅತ್ಯಾಚಾರ ಮುಂತಾದ ಲೈಂಗಿಕ ಅಪರಾಧಗಳು ಹೆಚ್ಚಾಗುತ್ತವೆ; ಸಮಾಜದಲ್ಲಿ ಅನೈತಿಕತೆಗೆ ಪ್ರಚೋದನೆ ಸಿಕ್ಕಂತಾಗಿ ಅಲ್ಲೋಲ ಕಲ್ಲೋಲವಾಗುತ್ತದೆ– ಮುಂತಾದ ವಾದಗಳನ್ನು ಲಾಗಾಯ್ತಿನಿಂದಲೂ ಮಾಡಿಕೊಂಡು ಬರಲಾಗಿದೆ. ಆದರೆ ಇಂತಹ ತರ್ಕಗಳು ಕೆಲವರ ಅನಿಸಿಕೆಯೇ ಹೊರತು ಅದಕ್ಕೆ ಯಾವುದೇ ವೈಜ್ಞಾನಿಕವಾದ ಸಂಶೋಧನೆಯ ಆಧಾರಗಳಿಲ್ಲ.

ಇವೆಲ್ಲವೂ ಸತ್ಯವೆಂದು ತೋರಿಸಲು ಮತ್ತು ತಮ್ಮ ಅನಿಸಿಕೆಯನ್ನು ನಿಜವೆಂದು ಹೇಳಲು ಸಾಕಷ್ಟು ಜನ ಪಾಶ್ಚಿಮಾತ್ಯ ದೇಶಗಳ, ಅದರಲ್ಲೂ ಹೆಚ್ಚಾಗಿ ಅಮೇರಿಕಾದ ಉದಾಹರಣೆ ನೀಡುತ್ತಾರೆ. ಪ್ರಪಂಚದ ಸಾಕಷ್ಟು ದೇಶಗಳಲ್ಲಿ ವಿವಾಹಪೂರ್ವ ಲೈಂಗಿಕಕ್ರಿಯೆ ಸಾಮಾಜಿಕ ಕಳಂಕವಲ್ಲ ಎನ್ನುವುದು ನಿಜವಾಗಿದ್ದರೂ ಅವರೆಲ್ಲಾ ನೈತಿಕ ಅಧಃಪತನಕ್ಕೆ ಇಳಿದಿದ್ದಾರೆ ಎನ್ನುವುದು ಉತ್ಪ್ರೇಕ್ಷೆ. ವೈಜ್ಞಾನಿಕ ಲೈಂಗಿಕ ಶಿಕ್ಷಣ ನೀಡುವುದರಲ್ಲಿ ಅಥವಾ ಆರೋಗ್ಯಪೂರ್ಣ ಲೈಂಗಿಕತೆಯ ಬಗೆಗೆ ಮುಕ್ತ ಮಾಹಿತಿಯನ್ನು ಹರಡುವುದರಲ್ಲಿ ಅಂತಹ ದೇಶಗಳೂ ಕೂಡ ಯಶಸ್ವಿಯಾಗಿಲ್ಲ. ಅಮೇರಿಕಾದಲ್ಲಿ ನೀಡುತ್ತಿರುವ ಲೈಂಗಿಕ ಶಿಕ್ಷಣವನ್ನು ಲೈಂಗಿಕತೆಯ ಸೂಕ್ಷ್ಮ ಅಂಶಗಳಿಂದ ಹೊರತಾದ ಸಂತಾನೋತ್ಪತ್ತಿಯ ಜೀವಶಾಸ್ತ್ರ (ರೀಪ್ರೊಡೊಕ್ಟಿವ್ ಬಯಾಲಜಿ) ಎಂದು ಅಲ್ಲಿನ ತಜ್ಞರೇ ಕರೆದಿದ್ದಾರೆ. ಆದ್ದರಿಂದ ಲೈಂಗಿಕ ಶಿಕ್ಷಣ ಅಥವಾ ಮಾಹಿತಿ ನೀಡಲು ನಾವು ಅವರ ಮಾದರಿಗಳನ್ನು ಅನುಸರಿಸಬೇಕಾಗಿಲ್ಲ.

## ಪರಿಹಾರಗಳು ಸುಲಭವಲ್ಲ

ಲೈಂಗಿಕತೆಯ ಬಗೆಗಿನ ಅಜ್ಞಾನ ತಪ್ಪು ತಿಳಿವಳಿಕೆಗಳನ್ನು ಹೋಗಲಾಡಿಸುವುದು ಮತ್ತು ಸ್ತ್ರೀಯರು ಹಾಗು ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯವನ್ನು ತಪ್ಪಿಸುವುದಕ್ಕೆ ಸರಳವಾದ ದಾರಿಗಳಿಲ್ಲ. ಶತಶತಮಾನಗಳಿಂದ ಎಲ್ಲವನ್ನೂ ಚಾಪೆಯ ಕೆಳಗೆ ತೂರಿಸಿ ಬದುಕುತ್ತಿರುವ ಸಮಾಜದಲ್ಲಿ ಇರುವ ನಿಜವಾದ ಸಮಸ್ಯೆಗಳೇನು ಎನ್ನುವುದೂ ಕೂಡ ಅರಿವಿಗೆ ಬರುವುದಿಲ್ಲ. ಲೈಂಗಿಕ ಮನೋಚಿಕಿತ್ಸಕರ ಬಳಿ ಹಂಚಿಕೊಳ್ಳುವ ಸಮಸ್ಯೆಗಳ ಬಗೆಗೆ ಬರೆದರೆ ಸುಸಂಸ್ಕೃತಿಯ ಮುಖವಾಡ ಹೊತ್ತಿರುವ ಸಮಾಜದ ಸಾಕಷ್ಟು ಜನ ನಂಬುವುದೂ ಇಲ್ಲ. 'ಸುಧಾ'ದ 'ಸುಖೀಭವ' ಅಂಕಣದಲ್ಲಿ ಕಲ್ಪಿತ ಸಮಸ್ಯೆಗಳ ಬಗೆಗೆ ಬರೆಯುತ್ತಿರಬಹುದೇ ಎನ್ನುವ ಅನುಮಾನವನ್ನು ಕೆಲವರು ವ್ಯಕ್ತಪಡಿಸಿದ್ದರು. ಇನ್ನೂ ಕೆಲವರು ಪತ್ರಿಕೆ ಬಂದ ತಕ್ಷಣ 'ಸುಖೀಭವ'ದ ಪುಟ ಮಕ್ಕಳ ಕಣ್ಣಿಗೆ ಬೀಳದಂತೆ ತಪ್ಪಿಸಲು ಆ ಪುಟವನ್ನು ಹರಿದುಬಿಡುತ್ತೇವೆ ಎಂದು ಕೂಡ ಹೇಳಿದ್ದರು.

ಇವೆಲ್ಲಾ ಈ ಅಂಕಣದ ಬಗೆಗಿನ ಟೀಕೆಯಾಗಿರದೆ ಜನರಲ್ಲಿ ಇರುವ ಅಜ್ಞಾನ, ತಪ್ಪು ತಿಳಿವಳಿಕೆಗಳ ಸೂಚಕ. ಲೈಂಗಿಕತೆಯ ಬಗೆಗೆ ಸಾರ್ವಜನಕವಾಗಿ ಚರ್ಚೆ ಮಾಡುವುದು ಎಂದರೆ ಮೈಮೇಲೆ ಮುಳ್ಳುಗಳು ಏಳುವಷ್ಟು ಕಸಿವಿಸಿಗೊಳ್ಳುವ ನಾವೆಲ್ಲಾ, ನಮ್ಮ ಸೀಮಿತ ಜೀವನದಿಂದ ಹೊರಬಂದು ಸುತ್ತಲಿನ ಸಮಾಜದ ವಾಸ್ತವಿಕತೆಗಳನ್ನು ಅರಿಯಬೇಕಿದೆ. ಮಕ್ಕಳಿಂದ

## ಕನ್ನಡ ಪತ್ರಿಕೋದ್ಯಮದಲ್ಲಿ ಶಿಕ್ಷಣ

ಇಪ್ಪತ್ತು ವರ್ಷಗಳ ಹಿಂದೆ ರದ್ದಿಯಂಗಡಿಯಲ್ಲಿ ಏನನ್ನೋ ಹುಡುಕುತ್ತಿದ್ದಾಗ ಸುಮಾರು 60ರ ದಶಕದಲ್ಲಿ ಲೈಂಗಿಕತೆಯ ಬಗೆಗೆ ವೈಜ್ಞಾನಿಕವಾಗಿ ತಿಳಿವಳಿಕೆ ನೀಡುವ ಕನ್ನಡ ಮಾಸಿಕವೊಂದರ ಕೆಲವು ಪ್ರತಿಗಳು ದೊರೆತಿದ್ದವು. ನಂತರ 80ರ ದಶಕದಲ್ಲಿ ರತಿವಿಜ್ಞಾನ ದರ್ಪಣ ಎನ್ನುವ ಹೆಸರಿನ ಮಾಸಿಕ ಪ್ರಾರಂಭವಾಗಿತ್ತು. ವೈದ್ಯರು, ಲೈಂಗಿಕತಜ್ಞರು, ಸಾಹಿತಿಗಳು ಮುಂತಾದವರ ಮೌಲ್ಯಯುತ ಬರಹಗಳಿದ್ದ ಈ ಪತ್ರಿಕೆ, ಕನ್ನಡದ ಜನತೆಗೆ ಅತ್ಯುತ್ತಮ ಲೈಂಗಿಕ ಶಿಕ್ಷಣ ನೀಡುತ್ತಿತ್ತು. ಆದರೆ ಇದರ ಮಾದರಿಯಲ್ಲಿ ಹುಟ್ಟಿಕೊಂಡ ಹಲವಾರು ಪತ್ರಿಕೆಗಳು ಕೇವಲ ರೋಚಕತೆಗೆ ಪ್ರಾಧಾನ್ಯತೆ ನೀಡಿ ಹಣ ಮಾಡುವತ್ತ ಗಮನ ಹರಿಸಿದಾಗ ಸರ್ಕಾರ ಎಲ್ಲಾ ಪತ್ರಿಕೆಗಳ ಮೇಲೆ ಕಡಿವಾಣ ಹಾಕಬೇಕಾಯಿತು. ದುರಾದೃಷ್ಟವಶಾತ್ ಇತರ ನೀಲಿ ಪತ್ರಿಕೆಗಳ ಜೊತೆಗೆ ರತಿವಿಜ್ಞಾನ ದರ್ಪಣ ಕೂಡ ಸಾವನ್ನಪ್ಪಿತ್ತು.

ಕನ್ನಡದ ಕೆಲವು ವಾರಪತ್ರಿಕೆಗಳು ಲೈಂಗಿಕ ಸಮಸ್ಯೆಗಳಿಗೆ ಪರಿಹಾರ ನೀಡುವ ಪ್ರಶ್ನೋತ್ತರ ಅಂಕಣವನ್ನು ಪ್ರಕಟಿಸಿದ್ದವು. ಆದರೆ 'ಗುಪ್ತ ಸಮಾಲೋಚನೆ'ಯ ಹೆಸರಿನಲ್ಲಿ ಹೆಚ್ಚಿನ ಸಂದರ್ಭದಲ್ಲಿ ಅವು ಓದುಗರನ್ನು ದಾರಿ ತಪ್ಪಿಸುತ್ತಿದ್ದವು. ಯಾವ ಪತ್ರಿಕೆಯೂ ಮಾನವನ ಲೈಂಗಿಕತೆಯಲ್ಲಿನ ದೈಹಿಕ ಅಂಶಗಳನ್ನು ಮೀರಿ ಮಾನಸಿಕ ಭಾವನಾತ್ಮಕ ವಿಚಾರಗಳಿಗೆ ಒತ್ತು ನೀಡಲಿಲ್ಲ. 'ಸುಧಾ'ದಲ್ಲಿ ಸುಮಾರು ಒಂದು ದಶಕದಿಂದ ಪ್ರಕಟವಾಗುತ್ತಿದ್ದ 'ಸುಖೀಭವ' ಅಂಕಣ ಮಾತ್ರ ಲೈಂಗಿಕತೆಯ ಎಲ್ಲಾ ನೆಲೆಗಳನ್ನೂ ಜನರಿಗೆ ಪರಿಚಯಿಸುವ ಪ್ರಯತ್ನ ಮಾಡಿತು.

